

ಮಲೆನಾಡು ಮಾತ್ರವಲ್ಲದೆ ಬಯಲುಸೀಮೆಯಲ್ಲೂ ಬೇಕಾದಷ್ಟು ಮರಗಳು ನಮ್ಮ ಖುಷಿಯಲ್ಲಿ, ಹಬ್ಬ ಹರಿದಿನದ ಆಚರಣೆಗಳಲ್ಲಿ, ನಿತ್ಯ ಸಲಕರಣೆಗಳಾಗಿ, ಅನಾರೋಗ್ಯದ ಸಮಯದಲ್ಲಿ ಔಷಧದ ಸಾಮಗ್ರಿಯಾಗಿ ನಮ್ಮೊಂದಿಗಿದ್ದವು. ಇದ್ದವು ಎಂದರೆ, ಕಾಡಿನಲ್ಲಿದ್ದುವೆಂದಲ್ಲ, ನಮ್ಮ ಸುತ್ತಮುತ್ತಲಿನ ಪರಿಸರದಲ್ಲೇ ಈ ಮರಗಳು ಬೇಕಾದಷ್ಟಿದ್ದವು. ಈಗ ಯೋಚಿಸಿ; ನಮ್ಮೊಂದಿಗೆ ಅಷ್ಟೆಲ್ಲ ಒಡನಾಟದಲ್ಲಿದ್ದ ಮರಗಳು ಎಲ್ಲಿ ಹೋದವು? ಸರಾಸರಿ ಮನುಷ್ಯನ ಆಯಸ್ಸಿಗಿಂತ ಹೆಚ್ಚೇ ಆಯುಷ್ಯ ಇರುವ ಮರಗಳು ನಮ್ಮ ಮುಂದೆಯೇ ಕಣ್ಮರೆಯಾಗಿದ್ದು ನಿಜವಲ್ಲವೇ?

ಹಾಗಾದರೆ ಇಷ್ಟೆಲ್ಲಾ ಲಕ್ಷಗಳು, ಕೋಟಿಗಳ ಸಂಖ್ಯೆಯಲ್ಲಿ ಸುಮಾರು ವರ್ಷಗಳಿಂದ ನೆಡುತ್ತಿರುವ ಸಸಿಗಳಲ್ಲಿ ನಮ್ಮ ಸ್ಮೃತಿಪಟಲದ ಭದ್ರಸ್ಥಾಯಿಯಾಗಿರುವ ಕೆಲವಾದರೂ ಮರಗಳು ಯಾಕೆ ಎಲ್ಲೂ ಬೆಳೆದಿಲ್ಲ? ನಗರ ಪ್ರದೇಶಗಳಲ್ಲಿ ಒತ್ತಟ್ಟಿಗಿರಲಿ, ಹಳ್ಳಿಯ ಪರಿಸರದಲ್ಲಿ ಕೂಡ ಈ ಮರಗಳು ಯಾಕಿಲ್ಲ?

ಪಶ್ಚಿಮ ಘಟ್ಟಗಳಲ್ಲಿರುವ ವೈವಿಧ್ಯಕ್ಕೆ ಸರಿಸಮಾನವಾದ ಮರಗಿಡ ಬಳ್ಳಿಗಳು ಈ ಪ್ರಪಂಚದಲ್ಲಿ ಬೇರೆಲ್ಲೂ ಇಲ್ಲ. ಒಮ್ಮೆ ಈ ಕಾಡು ನಾಶವಾದರೆ ಅದನ್ನು ನಾವು ಮತ್ತೆ ಸೃಷ್ಟಿಸಲಾಗದು. ಆದರೆ ನಮ್ಮ ಕಾಡಿನ ಅನೇಕ ಬಗೆಯ ಮರಗಳು ಬೆಂಗಳೂರು, ಮೈಸೂರು ಒಳಗೊಂಡಂತೆ ಬಹಳಷ್ಟು ಪ್ರದೇಶದಲ್ಲಿ ಹೆಚ್ಚಿನ ಶ್ರಮವಿಲ್ಲದೆ ಬೆಳೆಯುತ್ತವೆ. ಬೆಳವಣಿಗೆಯ ವೇಗ ವಿದೇಶಿ ಮರಗಳಿಗಿಂತ ಕಡಿಮೆ ಎಂಬ ಕಾರಣಕ್ಕೆ ಇವುಗಳನ್ನು ಬೆಳೆಸಲು ಹೆಚ್ಚಿನ ಆಸ್ಥೆ ವಹಿಸುವುದಿಲ್ಲ. ಫೈಕಸ್ ಜಾತಿಯ ವೃಕ್ಷಗಳು (ಆಲ, ಬಸರಿ, ಗೋಣಿ, ಪಿಳಲಿ, ಅರಳಿ ಇತ್ಯಾದಿ) ಜೀವಕೊಂಡಿಯಲ್ಲಿ ಮಹತ್ತರ ಪಾತ್ರ ನಿರ್ವಹಿಸುತ್ತವೆ. ನಗರದ ರಸ್ತೆಗಳನ್ನು ಅಂದಗಾಣಿಸುವ ಆದ್ಯತೆ ಇದ್ದಾಗಲೂ ನಮ್ಮವೇ ಆದ ಕಕ್ಕೆ, ಹೊಳೆದಾಸವಾಳ, ಚಂದಾಳ ಮರಗಳಿವೆ. ಇಷ್ಟೆಲ್ಲಾ ವೈವಿಧ್ಯಮಯವಾದ, ನಮ್ಮವೇ ಮರಗಳಿರುವಾಗ ಎಲ್ಲಾ ಬಿಟ್ಟು ಟಬೂಬಿಯ ನೆಡುವ ತಯಾರಿ ಕಂಡಿದ್ದೇ ನನ್ನ ನಿರಾಸೆಗೆ ಕಾರಣ.

ಇರಲಿ, ಅಷ್ಟೊಂದು ಗುಂಡಿಗಳನ್ನು ತೋಡಿದ್ದಾರಲ್ಲ, ಇದರಲ್ಲಿ ನಮ್ಮ ಬಾಲ್ಕನಿಯಲ್ಲಿ ಬೆಳೆಸಿರುವ ದೇವದಾರು, ಕಾಮತ್ತಿ, ಪಾದ್ರಿ, ನೀರೊಟ್ಟೆ, ಜಾಲಗರಿ, ಪುತ್ರಂಜೀವ ಇತ್ಯಾದಿ ಗಿಡಗಳನ್ನು ತಂದು ನೆಡೋಣವೆನಿಸಿತು. ಅಷ್ಟರಲ್ಲೇ ನಮ್ಮ ಯಜಮಾನರೂ ಬಂದರು. ಅಲ್ಲೇ ಟಬೂಬಿಯ ಗಿಡ ನೆಡುವುದರ ಉಸ್ತುವಾರಿ ವಹಿಸಿದ್ದ ಅರಣ್ಯ ಅಧಿಕಾರಿಯವರ ಬಳಿ ನಮ್ಮ ಪರಿಚಯ ಹೇಳಿ, ವಿನಾಶದಂಚಿಗೆ ಸರಿದಿರುವ ಪಶ್ಚಿಮ ಘಟ್ಟಗಳ ವಿರಳ ಸಸಿಗಳನ್ನು ನಮ್ಮ ಮನೆಯಲ್ಲಿ ಬೆಳೆಸಿರುವುದಾಗಿಯೂ, ಅವುಗಳನ್ನು



ಕೆರೆ ಏರಿ ಬದಿಯಲ್ಲಿ ಮಗಳೊಂದಿಗೆ ಗಿಡ ನೆಡುತ್ತಿರುವ ಲೇಖಕಿ